# ಮಿಲಿನಿಯ 2015

## ಪ್ರಗತಿಶೀಲ ಮಹಿಳೆ ವಿಶ್ವದ ಕ್ಲಿಷ್ಟ ಸಮಸ್ಯೆ ಎದುರಿಸುವಲ್ಲಿ

## ಮಿಲಿನಿಯ 2015, ಪಾತ್ರ ಮತ್ತು ಧ್ಯೇಯ

ಸಮಾಜದಲ್ಲಿ ಮಹಿಳೆಯರ ಪಾತ್ರಕ್ಕೆ ಒದಗುವ ಮನ್ನಣೆ ಹಾಗೂ ಧೃಡವಾದ ಭವಿಷ್ಯ -- ಇದು ಮಿಲಿನಿಯ 2015 ನ ಕರಯಲ್ಲಿಯೇ ವ್ಯಕ್ತವಾಗುತ್ತದೆ. ಮಹಿಳೆಯರು ಸಮಾಜದಲ್ಲಿ ಬರುವ ಕ್ಲಿಷ್ಟ ಸಮಸ್ಯೆಗಳನ್ನು ಎದುರಿಸುವಲ್ಲಿ ಬಹು ಮಹತ್ತರ ಪಾತ್ರ ವಹಿಸುವರು. ಬದಲಾವಣೆಗಳು ಹೊಂದಿರುವ ಭವಿಶ್ಯವನ್ನು ರೂಪಿಸಿ, ನಿರ್ವಹಿಸುವ ಸಾಮರ್ಥ್ಯ ಉಳ್ಳವರು. ಇದು ಅವರ ವಿಶೇಷತೆ. ಪ್ರಕೃತಿಯ ಭೀಭತ್ಸದಿಂದಾಗುವ ವಿನಾಶದ ವೇಳೆಯಲ್ಲಿ, ಮಾನವರ ನಡುವಿನ ಘರ್ಷಣೆಗಳಲ್ಲಿ ಸಿಲುಕಿದ ಸಮಾಜದಲ್ಲಿ ಐಕಮತ್ಯ ತರುವ ನಿಟ್ಟಿನಲ್ಲಿ ಮಹಿಳೆಯರು ದಿಟ್ಟ ಹೆಜ್ಜೆ ಹಾಕುವರು. ವಿವಿಧ ವರ್ಗಗಳ, ಜಗತ್ತಿನ ಮಹಿಳೆಯರ ಮಧ್ಯೆ ಸಂಪರ್ಕದ ಜಾಲವನ್ನು ಬೆಳೆಸಿ ಮಧ್ಯಸ್ಥರಾಗಿ ಸೌಹಾರ್ದತೆ ಕಾಪಾಡುವಲ್ಲಿ ಸಿದ್ಧಹಸ್ತರು. ಮಹಿಳೆಯರು ಸಾಮಾಜಿಕ ಬದುಕಿನ ನಾಯಕಿಯರು ಎಂದು ಪ್ರತಿಪಾದಿಸುವುದು ಮಿಲಿನಿಯಮ್ 2015 ರ ಧ್ಯೇಯ ಮತ್ತು ಬಾಧ್ಯತೆ.

ಮಿಲಿನಿಯ 2015ರಲ್ಲಿ ಭಾಗವಹಿಸಿರುವ ಮಹಿಳೆಯರು ತಮ್ಮ ಕಾರ್ಯರಂಗದ ಚಟುವಟಿಕೆಗಳನ್ನು ತಮ್ಮ ಸಂಪರ್ಕದ ಜಾಲದಲ್ಲಿರುವ ಎಲ್ಲರೊಡನೆ ವಿಚಾರ ವಿನಿಮಯ ನಡೆಸುತ್ತಾರೆ. ಸ್ಥಳೀಯರ ಮತ್ತು ವಿಶ್ವದ ರಾಷ್ಟ್ರಗಳ ಸಂಕಷ್ಟಗಳಲ್ಲಿ ನೆರವಿನ ಆವಶ್ಯಕವಿದ್ದಾಗ ಎಲ್ಲರಲ್ಲಿಯೂ ಸಂಪರ್ಕ ಅಗತ್ಯ ಎಂದು ಮಹಿಳೆಯರು ನಿರೂಪಿಸುತ್ತಾರೆ.

ಸಂಪರ್ಕದ ಮಾಧ್ಯಮ ಪ್ರಗತಿಯತ್ತ ಮುನ್ನಡೆಯುತ್ತಿರುವಂತೆ ಮಿಲಿನಿಯ 2015ರ ಮಹಿಳೆಯರು ಪ್ರಗತಿಶೀಲರಾಗುವರು. ಸಂಪರ್ಕಗಳು ಹೆಚ್ಚಿದಂತೆ ಜಗತ್ತಿನಲ್ಲಿನ ಮಹಿಳೆಯರೊಡನೆ ವಿಚಾರ ವಿನಿಮಯದಿಂದ ತಮ್ಮ ಕಾರ್ಯರಂಗವನ್ನು ವಿಸ್ತರಿಸಬಹುದು. ತಮ್ಮ ವಿಚಾರಗಳನ್ನು ಸಕ್ರಿಯೆಯಾಗಿ ಮಾಡಲು ಪ್ರೋತ್ಸಾಹ, ಉತ್ತೇಜನ ಪಡೆಯಬಹುದು.

ಮಿಲಿನಿಯ 2015ರ ಮಹಿಳೆಯರ ಕಾರ್ಯರಂಗಗಳಲ್ಲಿ, ಸಂಸ್ಕೃತಿಗಳಲ್ಲಿ, ವರ್ಗಗಳಲ್ಲಿ, ಭಾಷೆಗಳಲ್ಲಿ
ಭಿನ್ನತೆ ಇದ್ದರೂ ಧ್ಯೇಯ ಒಂದೇ. ಮಾರ್ಪಡುವ ಸಮಾಜದ ಭವಿಷ್ಯವನ್ನು ರೂಪಿಸುವ ನಿಟ್ಟಿನಲ್ಲಿ ಮುನ್ನಡೆ. ಸಮಾನತೆ ಮತ್ತು ಭಿನ್ನತೆಗಳ ಚರ್ಚೆ ಮತ್ತು ಪರಿಶೀಲನೆ. ಇದು ಪ್ರಪಂಚದಾದ್ಯಂತ ನಡೆಯುವ ಚಟುವಟಿಕೆ.

ಮಿಲಿನಿಯ 2015ಮಹಿಳೆ ಸ್ವಾವಲಂಬಿ, ಧೃಡ ಮನಸ್ಕಳು, ಪ್ರಗತಿಪರಳು, ಅಬಲೆಯಲ್ಲದ ಸಬಲೆ. ಮನುಜ ಕುಲದಲ್ಲಿ ಮಾನವೀಯತೆ ತುಂಬಿ, ಸಂಕಷ್ಟಗಳಲ್ಲಿ ನೆರವು, ಆಸರೆ ನೀದುವ ಸಮಾಜವನ್ನಾಗಿ ಮಾರ್ಪಡಿಸುವ ಮಹಿಳೆಯರನ್ನು ಮುಂದಿಡುವುದೇ ಮಿಲಿನಿಯ 2015 ಉದ್ದೇಶ.